ಮಾನ್ಯ ಮಂತ್ರಿಗಳ ಉತ್ತರವೇನಿದೆ, this sends wrong signals to the society ಯಾರಿಗೋ ಒಬ್ಬನಿಗೆ ಮುಂದೆ ಅಪರಾಧ ಮಾಡಬೇಕು, ಕೊಲೆ ಮಾಡಬೇಕು ಎನ್ನುವ ಮನೋಭಾವನೆ ಇದ್ದರೆ, ಅವನಿಗೆ ಮುಂದೆ ನಾನು ಆ ಅಪರಾಧ ಮಾಡಿದರೆ ನನಗೆ ಶಿಕ್ಷೆಯಾಗುತ್ತದೆ ಎನ್ನುವ ಭಯವಿಲ್ಲದಿದ್ದರೆ ಅಥವಾ ತಪ್ಪಿಸಿಕೊಳ್ಳಬಹುದು ಎಂಬ ಧೈರ್ಯ ಇದ್ದರೆ, ಈ Criminal system of justice ಬದುಕಬಹುದು ಎಂಬ ಧೈರ್ಯ ಇದ್ದರೆ, ಇಂತಹ ಇನ್ನಷ್ಟು ಪ್ರಕರಣಗಳಿಗೆ ನಾವು ಇಂಬು ಕೊಟ್ಟಂತಾಗುತ್ತದೆ. ಇದರ ಬಗ್ಗೆ ಅಂದರೆ ಸ್ಪೀಡ್ ಜಸ್ಟೀಸ್ ಕೊಡಿಸುವ ಬಗ್ಗೆ, ಗಟ್ಟಿಯಾಗಿರುವಂತಹ ವಿಟೆನೆಸ್‌ಗಳನ್ನು ಹಿಡಿದುಕೊಂಡು ಬರುವುದಕ್ಕೆ, ಶಿಕ್ಷೆ ಕೊಡಲೇಬೇಕಾದ ಪ್ರಕರಣಗಳಲ್ಲಿ ಶಿಕ್ಷೆಯಾಗುವಂತೆ ಮಾಡುವುದಕ್ಕೆ, ಗೃಹ ಇಲಾಖೆಯ ವತಿಯಿಂದ ಏನಾದರೂ ಚಿಂತನೆ ನಡೆದಿದೆಯೇ? ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಕಳೆದ ಮೂರು ವರ್ಷಗಳಲ್ಲಿ ಎಷ್ಟು ಕೇಸಸ್ ಡಿಸ್ಪೋಸ್ ಆಗಿದೆ, ಅದರಲ್ಲಿ ಎಷ್ಟು ಕನ್‌ವಿಕ್ಷನ್ ಆಗಿದೆ ಎಂಬ ವಿವರಗಳನ್ನು ನಾನು ಈಗ ಹೇಳಿದ್ದೇನೆ. ಮಾನ್ಯ ಸದಸ್ಯರಿಗೆ ಗೊತ್ತಿದ್ದಂತೆ ಅನೇಕ ಕೇಸ್‌ಗಳಲ್ಲಿ ಮೂರು ವರ್ಷಗಳಲ್ಲಿ ಡಿಸ್ಪೋಸ್ ಆಗುವುದಿಲ್ಲ. ಸಾಕ್ಷಿಗಳ ಗೈರು ಹಾಜರಿಯಿಂದಾಗಿ ಅಥವಾ ಇನ್ನಿತರ ಅನೇಕ ಕಾರಣಗಳಿಂದ ಕೇಸ್‌ಗಳು ಡಿಸ್ಪೋಸ್ ಆಗದೇ ಇರಬಹುದು. ಮಾನ್ಯ ಸದಸ್ಯರು ಹೇಳಿದಂತೆ ಅನೇಕ ಪ್ರಕರಣಗಳಲ್ಲಿ ಸಾಕ್ಷಿ ಹೇಳಲು ಬರುವವರು ಕೆಲವು ಸಲ ಭಯದಿಂದ ಅಥವಾ ಅವರಿಗೆ ರಕ್ಷಣೆ ಇಲ್ಲದ ಕಾರಣ hostile ಆಗುತ್ತಾರೆ. ನಮಗೆ ಏಕೆ ಬೇಕು ಇದರ ಉಸಾಬರಿ ಎಂಬುದು ಅವರ ಅಭಿಪ್ರಾಯವಾಗಿರುತ್ತದೆ. ಮೊನ್ನೆ ಇದರ ಬಗ್ಗೆ ರಿವ್ಯೂ ಮಾಡುವಾಗ ನಾನು, ಮಾನ್ಯ ಕಾನೂನು ಸಚಿವರು ಮತ್ತು ಪ್ರಾಸಿಕ್ಯೂಷನ್ ಡೈರೆಕ್ಟರ್‌ರವರು ಇವರೆಲ್ಲರೂ ಸೇರಿ ಇದರ ಬಗ್ಗೆ ವಿಚಾರ ಮಾಡಿದ್ದೇವೆ. ಹೆಚ್ಚಿನ ಸಂಖ್ಯೆಯಲ್ಲಿರುವ ಅಪರಾಧಿಗಳಿಗೆ ಶಿಕ್ಷೆಯನ್ನು ಕೊಡಿಸುವುದು ಮತ್ತು ಕನ್‌ವಿಕ್ಷನ್ ರೇಟ್ ಅನ್ನು ಹೆಚ್ಚು ಮಾಡುವ ಬಗ್ಗೆ ನಾವು ವಿಚಾರ ಮಾಡಿದ್ದೇವೆ. ಹೆಚ್ಚಿನ ಸಂಖ್ಯೆಯಲ್ಲಿ ಅಪರಾಧಿಗಳು ಕನ್‌ವಿಕ್ಟ್ ಆದರೆ ಮಾತ್ರ ಕಾನೂನಿನ ಬಗ್ಗೆ ಜನರಿಗೆ ಭಯ ಹುಟ್ಟುತ್ತದೆ. ಎಲ್ಲರೂ ಅಕ್ವಿಟ್ ಆಗುತ್ತಾ ಹೋದರೆ ಯಾರಿಗೂ ಅದರ ಬಗ್ಗೆ ಭಯವೇ ಇರುವುದಿಲ್ಲ. ಅದಕ್ಕಾಗಿ ವಿಟ್‌ನೆಸ್ ಪ್ರೊಟೆಕ್ಷನ ಗ ಆಕ್ಟ್‌ಗೆ ಏನಾದರೂ ಒಂದು ಅಮೆಂಡ್‌ಮೆಂಟ್ ಅನ್ನು ತರುವ ಬಗ್ಗೆ ಅಥವಾ ಈ ಬಗ್ಗೆ ಬೇರೆ ಯಾವುದಾದರೂ ರೂಪದಲ್ಲಿ ಕಾನೂನೊಂದನ್ನು ತರುವ ಬಗ್ಗೆ ಇಲಾಖೆಯಲ್ಲಿ ಒಂದು ಚಿಂತನೆ ನಡೆದಿದೆ. ಮಾನ್ಯ ಸದಸ್ಯರು ಕೊಟ್ಟಂತಹ ಸಲಹೆ ಖಂಡಿತವಾಗಿಯೂ ಬಹಳ ಒಳ್ಳೆಯದಾಗಿದೆ. ನಾನು ಖಂಡಿತವಾಗಿ ಅದರ ಬಗ್ಗೆ ಕಾನಾನು ಇಲಾಖೆಯ ಜೊತೆಯಲ್ಲಿ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೇ, ಎಷ್ಟು ಪ್ರಕರಣಗಳಲ್ಲಿ ಶಿಕ್ಷೆಯಾಗಿದೆ? ವರ್ಷವಾರು ಮಾಹಿತಿ ನೀಡುವುದು. ಎಂಬ ನನ್ನ ಪ್ರಶ್ನೆಗೆ ಮಾನ್ಯ ಮಂತ್ರಿಗಳು ನ್ಯಾಯಾಲಯದಲ್ಲಿ ಇತ್ಯರ್ಥವಾದ ಯಾವುದೇ ಪ್ರಕರಣದಲ್ಲಿ ಶಿಕ್ಷೆಯಾಗಿರುವುದಿಲ್ಲ ಎಂಬ ಉತ್ತರ ಕೊಟ್ಟಿದ್ದಾರೆ. ಇದುವರೆಗೆ ಬಂಧಿಸಿರುವವರೆಲ್ಲರೂ ಕೂಡ ನಿರಪರಾಧಿಗಳು ಎಂದು ಇದರಿಂದ ಭಾಸವಾಗುತ್ತದೆ. ಅವರನ್ನು ಇಷ್ಟು ದಿನ ಜೈಲಿನಲ್ಲಿಟ್ಟಿರುವುದರಿಂದ ನಿರಪರಾಧಿಗಳಿಗೆ ಶಿಕ್ಷೆ ಕೊಟ್ಟಂತಾಗುತ್ತದೆ. ಬಾಂಬೆನಲ್ಲಿ ಕಾಂಟ್ರಾಕ್ಟ್ ಗೂಂಡಾಗಳು ಏನಿರುತ್ತಾರೆ ಅದೇ ತರಹ ಬೆಂಗಳೂರಿನಲ್ಲಿ ಕಾಂಟ್ರಾಕ್ಟ್ ಗೂಂಡಾಗಳು ಏನಾದರೂ ಇದ್ದರೆ, ಅವರಿಗೆ ನಮಗೆ ಯಾರಿಗೂ ಶಿಕ್ಷ ಆಗುವುದೇ ಇಲ್ಲ ಎನ್ನುವಂತಹ ಸಂದೇಶ ಹೋದರೆ, ನಾಗರೀಕರ ಗತಿಯೇನು? ಈ ರೀತಿಯಲ್ಲಿ ಉತ್ತರ ಟೈಪು ಮಾಡಿರುವುದು ತಪ್ಪಿದೆಯೇ? ಅಥವಾ ಬೇರೆ ಕಾರಣವೇ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸುತ್ತಾರೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಅದಕ್ಕಾಗಿಯೇ ನಾನು ಆಗಲೇ ಅವರಿಗೆ ಸ್ಪಷ್ಟಪಡಿಸಿದೆ. ಟ್ರಯಲ್ ಹಂತದಲ್ಲಿ ಪೆಂಡಿಂಗ್ ಟ್ರಯಲ್ ಎಷ್ಟಿವೆ, ಅನ್-ಡಿಟೆಕ್ಟೆಡ್ ಎಷ್ಟಿವೆ? ಕನ್‌ವಿಕ್ಷನ್ ಎಷ್ಟಾಗಿವೆ ಎಂಬ ಬಗ್ಗೆ ಕಳೆದ ಮೂರು ವರ್ಷಗಳ ಪ್ರಕರಣಗಳ ಅಂಕಿ-ಅಂಶಗಳನ್ನು ನಾನು ಈಗ ತಾನೇ ಮಾನ್ಯ ಸದಸ್ಯರಿಗೆ ಓದಿ ಹೇಳಿದ್ದೇನೆ. ಕಳೆದ ಮೂರು ವರ್ಷಗಳಲ್ಲಿ ಒಂದೂ ಪ್ರಕರಣದಲ್ಲಿ ಶಿಕ್ಷೆಯಾಗಿಲ್ಲ ಎಂಬ ಉತ್ತರವನ್ನು ನಾನು ನಿಮಗೆ ಸಪ್ಲಿಮೆಂಟರಿ ಎಕ್ಸ್‌ಪ್ಲನೇಷನ್ ಕೊಡುವಾಗ ತಿದ್ದಿಕೊಂಡು ನಾನು ಈ ಅಂಕಿ ಅಂಶಗಳನ್ನು ತಮಗೆ ಹೇಳಿದ್ದೇನೆ. ಅನೇಕ ಪ್ರಕರಣಗಳು ಅದರಲ್ಲೂ ಕೊಲೆ ಪ್ರಕರಣಗಳು ಮೂರು ವರ್ಷಗಳಲ್ಲಿ ಕ್ವಿಕ್ಕಾಗಿ ಡಿಸ್ಪೋಸ್ ಆಗುವುದಿಲ್ಲ. ಆ ದೃಷ್ಟಿಯಿಂದ ಎಷ್ಟು ಡಿಸ್ಪೋಸಲ್ ಆಗಿವೆ, ಅದರಲ್ಲಿ ಎಷ್ಟು ಕನ್‌ವಿಕ್ಷನ್ ಆಗಿದೆ ಎಂಬ ಅಂಕಿ ಸಂಖ್ಯೆಗಳನ್ನು ನಾನೀಗ ನಿಮ್ಮ ಮುಂದಿಟ್ಟಿದ್ದೇನೆ. ಅದರಲ್ಲಿ ಏನೂ ಬಂದಿಲ್ಲ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಇಂತಹ ಮೊಕದ್ದಮೆಗಳು ಏನು ತೀರ್ಮಾನ ಆಗಿದೆಯೋ, ಇದರ ಮೇಲೆ ಸರ್ಕಾರ ಸುಪ್ರೀಂ ಕೋರ್ಟ್‌ವರೆಗೂ ಎಷ್ಟು ಅಪೀಲ್ ಹೋಗಿದೆ? ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸುತ್ತಾರೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆ ಮಾಹಿತಿ ಈಗ ನನ್ನ ಬಳಿ ಇಲ್ಲ. ತಾವು ಈ ಬಗ್ಗೆ ನನಗೆ ಪ್ರತ್ಯೇಕವಾಗಿ ಪ್ರಶ್ನೆ ಕೇಳಿದರೆ ಹೈಕೋರ್ಟಿಗೆ ಮತ್ತು ಸುಪ್ರೀಂ ಕೋರ್ಟ್‌ಗೆ ಎಷ್ಟೆಷ್ಟು ಪ್ರಕರಣಗಳಲ್ಲಿ ಸರ್ಕಾರ ಅಪೀಲ್ ಹೋಗಿದೆ ಎಂಬ ವಿವರಗಳನ್ನು ನೀಡುತ್ತೇನೆ.

ಶ್ರೀ ಕೆ. ಶ್ರೀನಿವಾಸ ಗೌಡ : ಮಾನ್ಯ ಅಧ್ಯಕ್ಷರೇ, ಕಳೆದ ಮೂರು ವರ್ಷಗಳಲ್ಲಿ ಅಂದರೆ ನಮ್ಮ ಸರ್ಕಾರ ಅಧಿಕಾರದಲ್ಲಿದ್ದ ಅವಧಿಯಲ್ಲಿ ಹರಿಜನರ ಮೇಲೆ ಕೇವಲ 1.6 ಪರ್ಸೆಂಟ್ ಕೊಲೆಗಳಾಗಿವೆ ಎಂದು ಮಾನ್ಯ ಗೃಹ ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಮಾನ್ಯ ಗೃಹ ಸಚಿವರು ಈ ಕಡೆ ಇದ್ದಾಗ, ಮೈಸೂರಿನಲ್ಲಿ ಒಂದು ಘಟನೆಯಾದಾಗ, ಹರಿಜನರ ಮೇಲೆ ಕಗ್ಗೊಲೆ ಆಗುತ್ತಿದೆ ಎಂದು ಮುಂತಾಗಿ ಹೇಳುತ್ತಿದ್ದರು. ಇವತ್ತು ಅಂಕಿ ಅಂಶಗಳನ್ನು ನೋಡಿದಾಗ ನಮ್ಮ ಸರ್ಕಾರ ಪರಿಶಿಷ್ಟ ಜಾತಿ :ಪರಿಶಿಷ್ಟ ಪಂಗಡದವರಿಗೆ ಬಹಳ ಪ್ರೊಟೆಕ್ಷನ್ ಕೊಟ್ಟಿದೆ ಎಂಬುದು ಕಂಡು ಬರುತ್ತದೆ. ಈ ಮಾತನ್ನು ಅವರೇ ಹೇಳುತ್ತಿದ್ದಾರೆ. ಅದಕ್ಕಾಗಿ ನಾನು ಬಹಳ ಸಂತೋಷವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : 1997ರಲ್ಲಿ 46 ಜನರ ಕೊಲೆಯಾಯಿತು. ನಂತರ 1998ರಲ್ಲಿ 24 ಜನರ ಕೊಲೆಯಾಯಿತು. ಅಂದರೆ ನಿಮ್ಮ ಸರ್ಕಾರ ಅಧಿಕಾರದಲ್ಲಿ ಕೊಲೆಯಾದವರ ಸಂಖ್ಯೆ ಮೊದಲು ಹೆಚ್ಚಿಗೆ ಇದ್ದದ್ದು ನಂತರವಷ್ಟೇ ಕಡಿಮೆಯಾಯಿತು.

ರಾಜ್ಯದ ಜನರಿಗೆ ಏತನೀರಾವರಿ ಯೋಜನೆಯ ಮೂಲಕ ನೀರು

172 (1712) ಶ್ರೀ ತಿಮ್ಮಣ್ಣ ಡಿ. ಸಿ. (ಕಿರುಗಾವಲು): ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭಾರಿ ನೀರಾವರಿ ಯೋಜನೆಯ ಅಚ್ಚುಕಟ್ಟು ಪ್ರದೇಶಗಳಿಂದ ನೀರು ಸರಿಯಾಗಿ ಬಳಕೆಯಾಗದೆ ಸೋರು ನೀರಾಗಿ ಬೇರೆ ರಾಜ್ಯಗಳ ಪಾಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಅ) ಹಾಗಿದ್ದಲ್ಲಿ ಅಂತಹ ನೀರನ್ನು ಪುನಃ ರಾಜ್ಯದಜನರಿಗೆ ಏತ ನೀರಾವರಿ ಮೂಲಕ ಒದಗಿಸಲು ಕೈಗೊಂಡಿರುವ ಕ್ರಮಗಳೇನು;

ಇ) ಈ ರೀತಿ ಪೋಲಾಗಿ ಬೇರೆ ರಾಜ್ಯಗಳಿಗೆ ಹರಿದುಹೋಗುವ ನೀರಿನ ಅಂದಾಜು ಪ್ರಮಾಣವೆಷ್ಟು?

ಶ್ರೀ ಎಚ್.ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು):

ಅ) ನೆರೆ ರಾಜ್ಯಗಳಿಗೆ ಅಂತರ ರಾಜ್ಯ ನದಿಗಳಿಂದ ಹರಿ ಬಿಡಲಾಗುತ್ತಿರುವ ನೀರನ್ನು ಪೂರ್ಣ ಪ್ರಮಾಣದಲ್ಲಿ ಲೆಕ್ಕಕ್ಕೆ ತೆಗೆದುಕೊಂಡು ಬಿಡುತ್ತಿರುವುದರಿಂದ ರಾಜ್ಯದಲ್ಲಿ ನೀರಾವರಿ ಯೋಜನೆಗಳು ಅಚ್ಚುಕಟ್ಟು ಪ್ರದೇಶಗಳ ಸೋರು ನೀರಿನಿಂದ ನೆರೆ ರಾಜ್ಯಗಳಿಗೆ ಯಾವುದೇ ಹೆಚ್ಚುವರಿ ನೀರು ಹರಿಯುತ್ತಿಲ್ಲ.

The full quantity of water that is being released to the neigh bouring states from the Inter State rivers is gauged and accounted for. Hence no additional quantity of water is released to the neighbouring States from the unutilised waters of State's Irrigation Projects Atchkat

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಡಿ.ಸಿ. ತಿಮ್ಮಣ್ಣ: ಮಾನ್ಯ ಅಧ್ಯಕ್ಷರೇ, ನೀರಾವರಿ ಇಲಾಖೆಯ ಅಧಿಕಾರಿಗಳು ನನ್ನ ಪ್ರಶ್ನೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ನಮ್ಮ ಮಂಡ್ಯ ಜಿಲ್ಲೆಯಲ್ಲಿ ಸಿಡಿಎಸ್ ಕ್ಯಾನಲ್‌ನಲ್ಲಿ ನೀರಿನ ಬಳಕೆಯಾಗಿ ಲೋಕಪಾವನಿ ಎಂಬ ಸಣ್ಣ ಟ್ರಿಬ್ಯೂಟರಿ ಮೂಲಕ ಹರಿದು ಹೋಗುವಂತಹ ನೀರು ಪುನಃ ಕಾವೇರಿ ನದಿಯನ್ನೇ ಸೇರುತ್ತದೆ. ಒಂದು ಸಲ ಪುನಃ ಆ ನೀರು ಕಾವೇರಿ ನದಿಯನ್ನು ಸೇರಿದ ಮೇಲೆ ಇಂಟರ್ ಸ್ಟೇಟ್ ವಾಟರ್ ಡಿಸ್ಪ್ಯೂಟ್ ಇದಕ್ಕೆ ಅನ್ವಯಿಸುತ್ತದೆ. ಅಂತಹ ಸೋರುವ ನೀರಿನ ಬಳಕೆ ಮಾಡುವುದಕ್ಕೆ ಸರ್ಕಾರ ಏನಾದರೂ ಕಾರ್ಯ ಕ್ರಮಗಳನ್ನು ಹಮ್ಮಿಕೊಂಡಿದೆಯೇ? ಎನ್ನುವಂತಹ ಪ್ರಶ್ನೆಯನ್ನು ನಾನು ಸನ್ಮಾನ್ಯ ಮಂತ್ರಿಗಳು ಕರೆದಿದ್ದಂತಹ ಸಭೆಯಲ್ಲೂ ಕೂಡ ಅಧಿಕಾರಿಗಳಿಗೆ ಕೇಳಿದ್ದೆ. ನನ್ನ ಅಂದಾಜಿನ ಪ್ರಕಾರ ಲೋಕಪಾವನಿ ಎಂಬ ಸಣ್ಣ ಟ್ರಿಬ್ಯೂಟರಿ ಮೂಲಕ ಹರಿದು ಹೋಗುವಂತಹ ನೀರಿನ ಪ್ರಮಾಣ 400 ಕ್ಯೂಸೆಕ್ಸ್. ಆ ನೀರು ಪುನಃ ಕಾವೇರಿ ನದಿ ಸೇರುವುದಕ್ಕೆ ಮೊದಲೇ ನಾವು ಉಪಯೋಗಿಸಿಕೊಂಡರೆ 30-40 ಸಾವಿರ ಎಕರೆ ಸಫರಿಂಗ್ ಅಚ್ಚುಕಟ್ಟಿಗೆ ನಾವು ನೀರಾವರಿಯನ್ನು ಒದಗಿಸಿಕೊಡಬಹುದು. ಅಂತಹ ನದಿಗಳಿಂದ, ಹಳ್ಳ ಕೊಳ್ಳಗಳಿಂದ ಹರಿದು ವೇಸ್ಟಾಗಿ ಪುನಃ ನದಿಯನ್ನೇ ಸೇರುವಂತಹ ನೀರನ್ನು ಏನಾದರೂ ಉಪಯೋಗಿಸಿಕೊಳ್ಳುವುದಕ್ಕೆ ಸರ್ಕಾರ ಕಾರ್ಯಕ್ರಮಗಳನ್ನೇನಾದರೂ ಹಮ್ಮಿಕೊಂಡಿದೆಯೇ? ಎನ್ನುವಂತಹ ಪ್ರಶ್ನೆಯನ್ನು ನಾನು ಕೇಳಿದ್ದೇನೆ. ಅದಕ್ಕೆ ಅಧಿಕಾರಿಗಳು ಕೊಟ್ಟಿರುವಂತಹ ಉತ್ತರ ಏನೆಂದರೆ, interstate river is gaged and accounted for. ಇದು ಎಲ್ಲರಿಗೂ ಗೊತ್ತಿರುವಂತಹ ವಿಚಾರ. ಆದರೆ no additional quantity of water is released. ನಾನು ರಿಲೀಸ್ ಮಾಡುವುದರ ಬಗ್ಗೆ ಕೇಳಿಲ್ಲ. ವೇಸ್ಟ್ ಆಗಿ ಅಚ್ಚುಕಟ್ಟು ಪ್ರದೇಶಕ್ಕೆ ಇಷ್ಟು ನೀರು ಎಂದು ನಾವು ಕೊಟ್ಟ ಮೇಲೆ, ಅದು ಬಳಕೆಯಾಗಿ, ಹೆಚ್ಚುವರಿ ನೀರಾಗಿ ಹರಿದು ಹಳ್ಳಕೊಳ್ಳಗಳ ಮೂಲಕ ಪುನಃ ನದಿಯನ್ನು ಸೇರುತ್ತಿರತಕ್ಕಂಥ ನೀರಿನ ಅಂದಾಜನ್ನು ಸರ್ಕಾರ ಇಲ್ಲಿಯವರೆಗೂ ಏನಾದರೂ ಕೂಡ ಮಾಡಿದೆಯೇ? ಎಂಬ ಪ್ರಶ್ನೆಯನ್ನು ನಾನು ಕೇಳಿದ್ದೇನೆ.

ಶ್ರೀ ಹೆಚ್.ಕೆ.ಪಾಟೀಲ್ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ತಮ್ಮಣ್ಣನವರು ಕೇಳಿರತಕ್ಕ ಪ್ರಶ್ನೆಯನ್ನು ಸರಿಯಾಗಿಯೇ ಅರ್ಥಮಾಡಿಕೊಳ್ಳಲಾಗಿದೆ ಎಂದು ನಾನು ತಿಳಿಸಬಯಸುತ್ತೇನೆ. ಆದರೆ ಮಾನ್ಯ ಸದಸ್ಯರು ಕಲ್ಪನೆ ಮಾಡಿಕೊಂಡ ಹಾಗೆ ಸೋರುವ ನೀರು ಏನಿದೆ, ಇದು ನದಿಗೆ ಸೇರಿದಾಕ್ಷಣ ಅದು ಬೇರೆ ರಾಜ್ಯಗಳಿಗೆ ಹೋಗುತ್ತದೆ ಎಂದೇನೂ ಅಲ್ಲ. ನಮ್ಮ ರಾಜ್ಯದ ಗಡಿ ಭಾಗದಲ್ಲಿ ನಾವು ಈ ನೀರಿನ ಮೆಷರ್‌ಮೆಂಟ್ ಅನ್ನು ಮಾಡುತ್ತೇವೆ. ಆದ್ದರಿಂದ ನಮ್ಮ ಟ್ರಿಬ್ಯೂಟರಿಯಲ್ಲಿ ಏನಾದರೂ ನೀರು ಹರಿದು ಹೋಗಲಿ ಅಥವಾ ಸೋರುವ ನೀರು ನಮ್ಮ ಮುಖ್ಯ ಪ್ರವಾಹದೊಳಗೆ ಹೋದರೂ ಸಹಿತ, ಬೇರೆ ರಾಜ್ಯಗಳಿಗೆ ನಾ ವು ಎಷ್ಟು ನೀರು ಬಿಟ್ಟಿದ್ದೇವೆ ಎನ್ನುವಂತಹ ಲೆಕ್ಕಾಚಾರವನ್ನು ನಾವು ನಮ್ಮ ಗಡಿ ಭಾಗದಲ್ಲಿ ಇಟ್ಟಿರತಕ್ಕ ಮೆಷರಿಂಗ್ಸ್ ಪಾಯಿಂಟ್ಸ್‌ನಲ್ಲಿ ಲೆಕ್ಕ ಹಾಕುತ್ತೇವೆ. ಆದ್ದರಿಂದ ನಮಗೆ ಲೆಕ್ಕಕ್ಕೆ ಸಿಗದ ಹಾಗೆ ಆ ನೀರು ಹರಿದು ಹೋಗುತ್ತದೆ ಎನ್ನುವಂತಹ ತಮ್ಮ ಆತಂಕವೇನಿದೆ ಅದು ಸರಿಯಾದುದಲ್ಲ. ಆದ್ದರಿಂದ ಮುಂದಿನ ಪ್ರಶ್ನೆಗಳು ಉದ್ಭವಿಸುವುದಿಲ್ಲ ಎಂದು ನಾನು ಹೇಳಬಯಸುತ್ತೇನೆ. ಅಂದು ನಾನು ಕರೆದಂತಹ ಸಭೆಯೊಂದರಲ್ಲಿ ತಾವು ಚರ್ಚೆ ಮಾಡಿದಂತಹ ಸಂದರ್ಭದಲ್ಲಿ ನೀರು ಸೋರಿಕೆಯಾಗಿ ಏನು ಹೋಗುತ್ತಿದೆ, ಇದನ್ನು ನಾವು ಸಮರ್ಪಕವಾಗಿ ಬಳಕೆ ಮಾಡಿಕೊಂಡರೆ, ಲಿಫ್ಟ್ ಇರಿಗೇಷನ್ ಮಾಡಿ ಅದನ್ನು ಉಪಯೋಗ ಮಾಡಿಕೊಂಡರೆ, ಈ ಟೈಲ್ ಎಂಡರ್ಸ್‌ಗೆ ಹೆಚ್ಚು ಅನುಕೂಲವಾಗುತ್ತದೆ, ಆದ್ದರಿಂದ ಅದನ್ನು ಮಾಡಬೇಕು ಎಂಬ ಸಲಹೆಯನ್ನು ಮಾನ್ಯ ಸದಸ್ಯರು ನೀಡಿದ್ದರು. ಈ ಸೋರುವ ನದಿ ನೀರಿನ ಪ್ರಮಾಣ ಎಷ್ಟು ಎಂಬ ಬಗ್ಗೆ ಕೂಡ ಲೆಕ್ಕಾಚಾರ ಇಲ್ಲಿ ಆಗುತ್ತಿದೆ. ಅದರ ಜೊತೆಗೆ ಎಲ್ಲೆಲ್ಲಿ ಅವಶ್ಯಕವಾಗಿರತಕ್ಕ ಲಿಫ್ಟ್ ಇರಿಗೇಷನ್ ಮಾಡಬೇಕು, ಅದರ ಮೂಲಕ ಟೈಲ್ ಎಂಡರ್ಸ್‌ಗೆ ಅನುಕೂಲ ಆಗುತ್ತಿದ್ದರೆ, ಅವುಗಳ ಬಗ್ಗೆಯೂ ಕೂಡ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ.

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೆ, ಸದಸ್ಯರು ಬಹಳ ಉತ್ತಮವಾದ ಪ್ರಶ್ನೆ ಕೇಳಿದ್ದಾರೆ. ಮೇಲ್ನೋಟಕ್ಕೆ ಅದು ಸರಳವಾಗಿ ಕಂಡರೂ ಕೂಡ ಗಂಭೀರವಾಗಿ ಆಲೋಚನೆ ಮಾಡಿದರೆ ನಾವೆಲ್ಲರೂ ಬಹಳ ತಲೆ ಕೆಡಿಸಿಕೊಂಡು ಬಗೆಹರಿಸಬೇಕಾದ ಸಮಸ್ಯೆ. ಈ ಸಮಸ್ಯೆ ಈಗಾಗಲೇ ಮುಖ್ಯ-ಮಂತ್ರಿಗಳ ತಲೆಗೆ ಹೋಗಿದೆ. ನಮಗೆ ಲಭ್ಯವಾದ ನೀರು ಕುಡಿಯುವ ನೀರಿರಬಹುದು, ಬೇಸಾಯಕ್ಕೆ ಉಪಯೋಗಿಸುವ ನೀರಿರಬಹುದು, ಅದನ್ನು ಬಳಕೆ ಮಾಡುವ ರೀತಿಯಲ್ಲಿ, ನೀರು ಕುಡಿಯುವವರಿಗೆ, ಬೇಸಾಯ ಮಾಡುವವರಿಗೆ ನೀರಿನ ಬಳಕೆ ಬಗ್ಗೆ ಸಂಸ್ಕಾರ ಸಂಸ್ಕೃತಿಯನ್ನು ಕಲಿಸಬೇಕಾಗುತ್ತದೆ. ಇದರ ಬಗ್ಗೆ ಕಾರ್ಯಕ್ರಮ ಹಮ್ಮಿಕೊಳ್ಳುವ ಬಗ್ಗೆ ನಾವು ಗಂಭೀರವಾಗಿ ಯೋಜನೆ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಅದಕ್ಕಾಗಿ ನಾನು ಸಚಿವರಲ್ಲಿ ಮತ್ತು ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಲಭ್ಯವಾಗಿರುವ ನೀರಿನಲ್ಲಿ ಬೇಸಾಯಕ್ಕೆ ಬೇಕಾಗಿರುವ ನೀರಿನ ಬಗ್ಗೆ, ಅದರ ಉಪಯೋಗದ ಬಗ್ಗೆ ರೈತರಿಗೆ ತಿಳುವಳಿಕೆ ಕೊಡುವುದಕ್ಕೆ, ಮತ್ತು ವಿಶೇಷವಾಗಿ ಲಭ್ಯವಿರುವ ನೀರು ಏನು ವೇಸ್ಟ್ ಆಗುತ್ತಿದೆ, ಆ ನೀರನ್ನು ಉಪಯುಕ್ತವಾಗಿ ಬಳಸಿಕೊಳ್ಳುವುದಕ್ಕೆ ವಿಶೇಷವಾದ ಕಾರ್ಯಕ್ರಮವೇನಾದರೂ ಸರ್ಕಾರ ಹಮ್ಮಿಕೊಂಡಿದೆಯೇ? ಆ ಕಾರ್ಯಕ್ರಮ ಇದ್ದರೆ ಈ ಸದನದ ಮೂಲಕ ರಾಜ್ಯದ ಜನತೆಗೆ ತಿಳಿಸಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಸಿ. ತಮ್ಮಣ್ಣ : ಸನ್ಮಾನ್ಯ ಮಂತ್ರಿಗಳು ನಾವು ಗೇಜ್ ಇಟ್ಟಿದ್ದೇವೆ, ಅದರ ಪ್ರಕಾರ ನೀರು ಬಿಡುತ್ತೇವೆಂದು ಹೇಳುತ್ತಾರೆ. ಅದು ನಮಗೂ ಗೊತ್ತಿದೆ. ಕಾವೇರಿ ನದಿಯ ಕೊನೆ ಭಾಗದಲ್ಲಿ ಬಳಿಗೋಡಿನಲ್ಲಿರುವ ಗೇಜ್‌ನಲ್ಲಿ ಹೆಚ್ಚು ಕಡಿಮೆಯಾಗಿದೆ ಎಂದು ನಾವು ಅಳೆದರೆ ನಮಗೇನೂ

ಪ್ರಯೋಜನವಾಗುವುದಿಲ್ಲ. ಅಚ್ಚುಕಟ್ಟು ಪ್ರದೇಶಗಳಿಗೆ ಎಷ್ಟು ನೀರು ಕೊಟ್ಟಿದ್ದಾರೆ, ಆ ನೀರು ಉಪಯೋಗವಾಗಿ ಬಳಕೆಯಾಗದೆ ಹಳ್ಳಕೊಳ್ಳಗಳಿಗೆ ಹೋಗುವಂಥದ್ದನ್ನು, ಅದೇ ಪ್ರದೇಶದಲ್ಲಿ ಸುಮ್ಮರ್ ಕ್ರಾಪ್ಸ್‌ಗೆ ಏನು ಸಫರಿಂಗ್ ಅಚ್ಚುಕಟ್ಟು ಇದೆ ಅಂಥದ್ದಕ್ಕೆ ಸಿಗುವಂಥದ್ದು ಇದ್ದರೆ, ನಮ್ಮ ಮೇಲೆ ಯಾವುದೇ ಇಂಟರ್‌ಸ್ಟೇಟ್ ವಾಟರ್ ಡಿಸ್ಪ್ಯೂಟ್ ಇಲ್ಲದೆ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿದ್ದರೆ ಅಂಥವನ್ನು ಉಪಯೋಗಿಸಿಕೊಳ್ಳುವುದಕ್ಕೆ ಅಂದಾಜು ತಯಾರು ಮಾಡಿ ಟ್ರಿಬ್ಯೂಟ್ಸ್‌ನಲ್ಲಿ ಎಷ್ಟು ನೀರು ವೇಸ್ಟ್ ಆಗುತ್ತಿದೆ, ಹಳ್ಳಕೊಳ್ಳಗಳಲ್ಲಿ ಎಷ್ಟು ನೀರು ವೇಸ್ಟ್ ಆಗುತ್ತಿದೆ, ಅದನ್ನು ಉಪಯುಕ್ತವಾಗಿ ಏತ ನೀರಾವರಿ ಮೂಲಕ ಉಪಯೋಗ ಮಾಡಿಕೊಂಡರೆ ಆ ಪ್ರದೇಶದ ಜನಗಳಿಗೆ ಎಷ್ಟು ಅಚ್ಚುಕಟ್ಟು ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಬೇಕೆಂದು ಕಲ್ಪನೆ ಇಟ್ಟುಕೊಂಡು ನಮ್ಮ ಅಧಿಕಾರಿಗಳು ಏನಾದರೂ ಅಂದಾಜು ಮಾಡಿದ್ದಾರೆಯೇ ಎಂದು ಪ್ರಶ್ನೆ ಕೇಳಿದ್ದೇನೆ, ಅದಕ್ಕೆ ಸನ್ಮಾನ್ಯ ಮಂತ್ರಿಗಳು ಇನ್ನು ಮುಂದಾದರೂ ಅಂದಾಜು ತಯಾರು ಮಾಡಿ ಕೆಳ ಭಾಗಕ್ಕೆ ಹೋಗಿ ಬೇರೆ ರಾಜ್ಯಗಳಿಗೆ ಹೋಗುವುದಕ್ಕೆ ಮೊದಲು ನಮ್ಮ ಪ್ರದೇಶದ ಜನಗಳಿಗೆ ಅನುಕೂಲವಾಗುವ ರೀತಿಯಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದು ನನ್ನ ಪ್ರಾರ್ಥನೆ.

ಶ್ರೀ ಹೆಚ್. ಕೆ. ಪಾಟೀಲ್ : ಅಧ್ಯಕ್ಷರೆ, ತಮ್ಮಣ್ಣನವರು ಕೊಟ್ಟಿರತಕ್ಕಂತಹ ಸಲಹೆ ಅತ್ಯಂತ ಉಪಯುಕ್ತವಾದುದು. ಜೊತೆಗೆ ಹಿರಿಯ ಸದಸ್ಯರಾದ ಸನ್ಮಾನ್ಯ ವೈ.ಕೆ. ರಾಮಯ್ಯನವರು ಹಲವು ವಿಚಾರಗಳನ್ನು ಎತ್ತಿದರು ಜೊತೆಗೆ ನಾವು ಯಾವ ರೀತಿಯಾಗಿ ಸದ್ಬಳಕೆ ಮಾಡುತ್ತೇವೆ ಎನ್ನುವುದರ ಬಗ್ಗೆ ವಿವರವಾದ ಉತ್ತರ ಬಯಸಿದ್ದಾರೆ. ನಾವು ಈ ಸಂದರ್ಭದಲ್ಲಿ ಇಷ್ಟೇ ಹೇಳಬಹುದು, ನೀರು ಬಳಕೆ ಮಾಡತಕ್ಕಂತಹ ನಮ್ಮ ಮನೋಭಾವ ಏನಿದೆ, ಫ್ಲಡ್ ಇರ್ರಿಗೇಷನ್ ಪ್ರದೇಶದಲ್ಲಿ ಅಂತೂ ಯಾವ ಮಟ್ಟದಲ್ಲಿ ನಾವು ನೀರು ಬಳಕೆಯನ್ನು ಮಾಡಬೇಕೋ ಅಪ್ರಮಾಣದಲ್ಲಿ ಮಾಡುತ್ತಿಲ್ಲ. ಬಹಳಷ್ಟು ಕಡೆ ವೇಸ್ಟ್ ಮಾಡುತ್ತಿದ್ದೇವೆ. ಆದ್ದರಿಂದ ನೀರು ಬಳಕೆದಾರರ ಸಹಕಾರ ಸಂಘಗಳ ಮುಖಾಂತರ ನೀರಿನ ಬಳಕೆಯನ್ನು ಸಮರ್ಪಕವಾಗಿ ಮಾಡುವುದಕ್ಕೆ ವಿಶೇಷವಾದ ತಿಳುವಳಿಕೆಯನ್ನು ಹಾಗೂ ಅವರಲ್ಲಿ ಆ ರೀತಿಯಾದ ಪರಿಣತಿಯನ್ನು ದೊರಕಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ: ಅಧ್ಯಕ್ಷರೆ, ರಾಜ್ಯದಲ್ಲಿರತಕ್ಕಂತಹ ಕೆಲವು ಅಚ್ಚುಕಟ್ಟುಗಳಲ್ಲಿ ಯೋಜನೆಗಳನ್ನು ಡಿಸೈನ್ ಮಾಡಿರತಕ್ಕಂಥದ್ದು ಸೆಮಿ ಡ್ರೈ ಕ್ರಾಪ್ಸ್. ಸೆಮಿ ಡ್ರೈ ಕ್ರಾಪ್ಸ್‌ಗೆ ಬದಲಾಗಿ ವೆಟ್ ಕ್ರಾಪ್ಸ್ ಬೆಳೆಯತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿದೆಯಾ? ಅದನ್ನು ತಪ್ಪಿಸತಕ್ಕಂತಹ ಕೆಲಸ ಏನು ಮಾಡಿದ್ದೀರಿ? ಜೊತೆಗೆ ಕೆಲವು ಬೆಳೆಗಳಿಗೆ ಅತಿ ಕಡಿಮೆ ನೀರಿನಿಂದ ಹೆಚ್ಚು ಬೆಳೆ ಬೆಳೆಯುವುದಕ್ಕೆ ಸಾಧ್ಯ ಇದೆ. ಕಬ್ಬು ಎಲ್ಲಕ್ಕಿಂತ ಹೆಚ್ಚಿಗೆ ನೀರು ಅವಶ್ಯಕತೆ ಇರುವ ಬೆಳೆ. ಅದಾದ ಮೇಲೆ ಭತ್ತ. ಇದು ಇನ್ನು ಹೆಚ್ಚಿಗೆ ನೀರಿನ ಅವಶ್ಯಕತೆ ಇರತಕ್ಕಂತಹ ಬೆಳೆ. ಇರತಕ್ಕಂತಹ ಯೂನಿಟ್ ಆಫ್ ವಾಟರ್‌ನಲ್ಲಿ ಒಂದು ಕ್ಯೂಬಿಕ್ ಮೀಟರ್ ಆಫ್ ವಾಟರ್‌ಗೆ ನಾವು ಎಷ್ಟು ಉತ್ಪಾದನೆ ಮಾಡಬಹುದು ಎಂದು ಆಲೋಚನೆ ಮಾಡಿ ಆ ತಿಳುವಳಿಕೆಯನ್ನು ರೈತರಿಗೆ ಒದಗಿಸತಕ್ಕಂತಹ ಕೆಲಸ ಸರ್ಕಾರ ಮಾಡುತ್ತಿದೆಯಾ?

ಶ್ರೀ ಹೆಚ್.ಕೆ. ಪಾಟೀಲ್ : ತಾವು ಹೇಳಿದ ಹಾಗೆ ಈ ವಿಚಾರವಾಗಿ ಸರ್ಕಾರ ಎಲ್ಲಿ ಸೆಮಿ ಡ್ರೈಕ್ರಾಪ್ಸ್‌ಗೆ ನೀರು ಕೊಡಬೇಕಾಗಿತ್ತು ಅಲ್ಲೆಲ್ಲಾ ವೆಟ್ ಕ್ರಾಪ್ಸ್ ಬೆಳೆಯುತ್ತಿರುವುದು ನೋಡಿದೆ. ಇದು ಬಹಳ ದಿನಗಳಿಂದ ನಡೆದುಕೊಂಡು ಬಂದಿದೆ. ಕೆಲವು ಕಡೆ ಕ್ರಾಪಿಂಗ್ ಪ್ಯಾಟ್ರನ್ ಮಾಡುವ ಪ್ರಶ್ನೆ ಇರುತ್ತದೆ. ಅದು ಹಲವಾರು ಕಾರಣಗಳಿಂದ ಸಾಧ್ಯವಾಗಿಲ್ಲ. ಈ ಎಲ್ಲಾ ವಿಚಾರಗಳನ್ನು ನಾವು ಗಂಭೀರವಾಗಿ ತೆಗೆದುಕೊಂಡು ರಾಜ್ಯ

ಸರ್ಕಾರ ತನ್ನದೇ ಆದ ರಾಜ್ಯ ಜಲಸಂಪನ್ಮೂಲ ನೀತಿಯನ್ನು ನಿರೂಪಣೆ ಮಾಡಬೇಕೆಂದು ನಿರ್ಣಯ ಮಾಡಿದೆ. ಆ ಸಂದರ್ಭದಲ್ಲಿ ಎಲ್ಲಾ ಪ್ರಶ್ನೆಗಳಿಗೆ ಈ ಎಲ್ಲಾ ಸಮಸ್ಯೆಗಳಿಗೆ ಉತ್ತರ ಒದಗಿಸುವುದಕ್ಕೆ ನಾವು ಎಲ್ಲಾ ರೀತಿಯಿಂದ ಪ್ರಯತ್ನ ಮಾಡುತ್ತೇವೆ.

ಶ್ರೀ ವೈ.ಕೆ. ರಾಮಯ್ಯ : ಹಿಂದಿನ ಕಾಲದಲ್ಲಿಯೂ ಕೂಡ ಇದರ ಬಗ್ಗೆ ಆಲೋಚನೆ ಮಾಡಿದ್ದರು. The question is how to prevent the wastage of unutilised water in the irrigated area. ಅದಕ್ಕೆ ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ಹಿಂದೆಯೂ ಕೂಡ ಹಾಕಿದ್ದಾರೆ. ಅದರಲ್ಲಿ ಒಂದು ಕಾರ್ಯಕ್ರಮ ಯಾವುದೆಂದರೆ, ಗದ್ದೆ ಹಾಳಾಗಿ ಹೋಗುತ್ತಿದೆ. ಲಿಫ್ಟ್ ಇರ್ರಿಗೇಷನ್ ಮುಖಾಂತರ ನೀರನ್ನು ಬೇಸಾಯಕ್ಕೆ ಉಪಯೋಗಿಸುವ ವ್ಯವಸ್ಥೆಯನ್ನು ಈಗಾಗಲೇ ಅನೇಕ ಕಡೆ ಮಾಡಲಾಗಿದೆ. That is one of the techniques the previous Government has adopted to prevent the water wastage in the irrigated area. Now all of them have stopped. ಅದರ ಬಗ್ಗೆ ಏನಾದರೂ ಹೇಳಿ. ಹಾಳಾಗುತ್ತಿರುವ ನೀರನ್ನು ಲಿಫ್ಟ್ ಮಾಡುವುದಕ್ಕೆ ಮಾಡಿದ ಎಲ್ಲ ಲಿಫ್ಟ್ ಇರ್ರಿಗೇಷನ್ ಕಾರ್ಯಕ್ರಮಗಳು ನಿಂತು ಹೋಗಿವೆ. ನಾನು ಮುಖ್ಯ ಮಂತ್ರಿಗಳ ಜೊತೆ ಈ ವಿಷಯ ಚರ್ಚೆ ಮಾಡಿದ್ದೇನೆ. ನೀರಾವರಿ ಸಚಿವರ ಜೊತೆ ಚರ್ಚೆ ಮಾಡಿದ್ದೇನೆ. ಲಿಫ್ಟ್ ಇರ್ರಿಗೇಷನ್‌ಗೆ ವ್ಯವಸ್ಥೆ ಮಾಡಿ, ರಿಪೇರಿ ಮಾಡಿ ಹಾಳಾಗುತ್ತಿರುವ ನೀರನ್ನು ಹೊಲಕ್ಕೆ ಕೊಡುವುದಕ್ಕೆ ಏನಾದರೂ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕೆ ಸಾಧ್ಯವಾ ಎಂದು ಮಂತ್ರಿಗಳಿಗೆ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ : ಸನ್ಮಾನ್ಯ ರಾಮಯ್ಯನವರು ಕೇಳಿದ ಪ್ರಶ್ನೆಗೆ, ತಮ್ಮಣ್ಣನವರಿಗೆ ಉತ್ತರ ಹೇಳುವಾಗ ಉತ್ತರ ಹೇಳಿದ್ದೆ. ಮತ್ತೆ ನಾನು ಪುನರುಚ್ಚಾರ ಮಾಡುತ್ತೇನೆ. ಲಿಫ್ಟ್ ಇರ್ರಿಗೇಷನ್ ಮಾಡುವ ಮೂಲಕ ಬಸಿ ನೀರನ್ನು ಹೆಚ್ಚು ಪ್ರಯೋಜನಕಾರಿಯನ್ನಾಗಿ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಲಾಗುತ್ತಿದೆ. ಅವರು ಹೇಳಿದ ಹಾಗೂ ಬಹಳಷ್ಟು ಲಿಫ್ಟ್ ಇರ್ರಿಗೇಷನ್ ತಾಂತ್ರಿಕ ಕಾರಣದಿಂದ ಮತ್ತೆ ಯಾವುದೋ ಕಾರಣದಿಂದ ಕೋಟ್ಯಾಂತ ರೂಪಾಯಿ ಇನ್‌ವೆಸ್ಟ್ ಮಾಡಿದರೂ ಕೂಡ ಇವುಗಳು ಕೆಲಸ ಮಾಡುತ್ತಿಲ್ಲ. ಅಂತಹ ಲಿಫ್ಟ್ ಇರ್ರಿಗೇಷನ್ ಪ್ರಾಜೆಕ್ಟ್‌ಗೆ ನಾವು ಸೂಕ್ತವಾದ ರಿಹ್ಯಾಬಿಲಿಟೇಷನ್ ಮಾಡಿ ಮತ್ತೆ ಅವುಗಳು ಸರಿಯಾಗಿ ಕೆಲಸ ಮಾಡುವ ಹಾಗೆ ಮಾಡುತ್ತೇವೆ. ಎಲ್ಲೆಲ್ಲಿ ಸೋರು ನೀರು ಜಾಸ್ತಿ ಇದೆ, ಅಲ್ಲಿ ಲಿಫ್ಟ್ ಇರ್ರಿಗೇಷನ್ ಪ್ರಪೋಸ್ ಮಾಡುತ್ತೇವೆ.

ಶ್ರೀ ಎಂ. ಎಸ್. ಆತ್ಮಾನಂದ: ಮಾನ್ಯ ಅಧ್ಯಕ್ಷರೆ, ನೀರಿನ ಸದ್ಬಳಕೆ ಮಾಡುವ ದೃಷ್ಟಿಯಲ್ಲಿ ಏತ ನೀರಾವರಿ ಯೋಜನೆ ಕೈಗೊಳ್ಳುತ್ತೇವೆಂದು ಸಚಿವರು ಹೇಳಿದರು, ಬಹಳ ಸಂತೋಷದ ವಿಚಾರ. ಆದರೆ ಮಾನ್ಯ ಸದಸ್ಯರಾದ ರಾಮಯ್ಯನವರು ಹೇಳಿದ ಹಾಗೆ ಅನೇಕ ಏತ ನೀರಾವರಿ ಯೋಜನೆಗಳು ಪ್ರಾರಂಭವಾಗಿ ಕಳೆದ ಎಂಟು-ಹತ್ತು ವರ್ಷಗಳಿಂದ ಕಳೆದರೂ ಕೂಡ ಕಾರ್ಯ ಅಪೂರ್ಣವಾಗಿರತಕ್ಕಂಥದ್ದು, ದಿನೇ ದಿನೇ ಅದರ ಯೋಜನಾ ವೆಚ್ಚ ಹೆಚ್ಚಾಗಿ ರೈತರಿಗೂ ಕೂಡ ಪ್ರಯೋಜನಾಗುವುದಿಲ್ಲ. ಕಾಮಗಾರಿ ಕೂಡ ಅನುಷ್ಠಾನಕ್ಕೆ ಬಾರದೆ ತುಂಬ ತೊಂದರೆಯಾಗುತ್ತಿದೆ. ಉದಾಹರಣೆಗೆ ವಿ.ಸಿ. ಅಚ್ಚುಕಟ್ಟಿನಲ್ಲಿ ಕೂಡ ಆರು 21 ಏತ ನೀರಾವರಿ ಯೋಜನೆಗಳು ಪ್ರಾರಂಭವಾಗಿ ಆರು ವರ್ಷವಾಯಿತು. ಕಾರ್ಯಾರಂಭ ಮಾಡಿದರೂ ಕೂಡ ಇನ್ನು ಕಾಮಗಾರಿ ಮುಗಿದಿಲ್ಲ. ಹೇಮಾವತಿ ಇದೆ ಆದೂ ಕೂಡ ನಿಗಧಿತ ವೇಳೆಯಲ್ಲಿ ಮುಗಿಸುತ್ತೀರಾ? ಇದರಿಂದ ರೈತರಿಗೆ ಪ್ರಯೋಜನವಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ತುರ್ತಾಗಿ ಕಾರ್ಯಕ್ರಮ ಕೈಗೊಳ್ಳುತ್ತದೆಯೇ ಎಂದು ನಾನು ತಮ್ಮ ಮುಖಾಂತರ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ : ಏತ ನೀರಾವರಿ ಯೋಜನೆಗಳನ್ನು ಕೈಗೆತ್ತಿಗೊಳುವ ಬಗ್ಗೆ ಹಾಗೂ ಬಹಳ ದಿವಸಗಳಿಂದ ಈ ಯೋಜನೆ ಕೈಗೆತ್ತಿಕೊಂಡು ಪೂರ್ಣವಾಗದೆ ಇರುವ ಹಿನ್ನೆಲೆಯಲ್ಲಿ ನಾನು ಮಾನ್ಯ ಮುಖ್ಯ ಮಂತ್ರಿಗಳು ಜೊತೆ ಚರ್ಚೆ ಮಾಡಿದ್ದೇನೆ. ಸುಮಾರು 20-30 ಲಿಫ್ಟ್ ಇರ್ರಿಗೇಷನ್ ಗಳಿಗೆ ಹಣಕಾಸಿನ ಕೊರತೆ ಸಲುವಾಗಿ 8, 9, 10 ವರ್ಷಗಳಿಂದ ಹಾಗೆ ನಿಂತು ಹೋಗಿವೆ. ಇಂಥವನ್ನು ಪೂರ್ಣಗೊಳಿಸುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಇಂಥವನ್ನು ಪೂರ್ಣಗೊಳಿಸುವುದಕ್ಕಾಗಿ ನಿಗಮಗಳಿಂದ, ಹುಡ್ಕೋದಿಂದ ಸಾಲ ಎತ್ತಿಕೊಳ್ಳುವುದಕ್ಕೆ ಸಾಧ್ಯವಾದರೆ ಆ ದಿಸೆಯಲ್ಲಿ ಪ್ರಯತ್ನ ಮಾಡಬೇಕೆಂದು ಮುಖ್ಯ ಮಂತ್ರಿಗಳು ಸೂಚನೆ ಕೊಟ್ಟಿದ್ದಾರೆ. ಆ ಹಿನ್ನೆಲೆಯಲ್ಲಿ ಹುಡ್ಕೋದವರ ಜೊತೆ ಸಂಪರ್ಕ ಮಾಡುತ್ತಿದ್ದೇವೆ. ಹಣಕಾಸು ಲಭ್ಯವಾದ ತಕ್ಷಣ ಇವುಗಳನ್ನು ಪೂರ್ಣಗೊಳಿಸುವ ಕೆಲಸ ನಾವು ಮಾಡುತ್ತೇವೆ.

ಹಿಪ್ಪರಗಿ ಬ್ಯಾರೇಜ್ ಯೋಜನೆಯ ಪ್ರಗತಿಯಲ್ಲಿ ವಿಳಂಬ

174 (1711) ಶ್ರೀ ಡೊಂಗರಾಂವ್ ಷಹಜಾನ್ ಇಸ್ಮಾಯಿಲ್ (ಅಥಣಿ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಪ್ಪರಗಿ ಬ್ಯಾರೇಜ್ ಯೋಜನೆಯು ಪ್ರಾರಂಭವಾಗಿ 27 ವರ್ಷ ಗತಿಸಿದರೂ ಈಯೋಜನೆ ಪೂರ್ಣಗೊಳ್ಳದೇ ಇರಲುಕಾರಣಗಳೇನು;

ಆ) ಈ ಯೋಜನೆಗೆ ಈವರೆಗೆ ಖರ್ಚಾದ ಹಣ ವೆಷ್ಟು?

ಇ) ಅಥಣಿ ತಾಲ್ಲೂಕಿನ ಹಲ್ಯಾಳ ಮತ್ತು ಐನಾಪುರ ಏತ ನೀರಾವರಿ ಕಾಲುವೆಸಹಿತ ಹಿಪ್ಪರಗಿ ಯೋಜನೆ ಪೂರ್ಣಗೊಳ್ಳಲು ಇನ್ನು ಬೇಕಾಗುವ ಹಣ ವೆಷ್ಟು?

ಈ) ಈ ಯೋಜನೆಯನ್ನು ಪೂರ್ಣಗೊಳಿಸಲು ಬೇಕಾಗಿರುವ ಕಾಲಾವಧಿ ಎಷ್ಟು?

ಶ್ರೀ ಹೆಚ್.ಕೆ.ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ಹಿಪ್ಪರಗಿ ಬ್ಯಾರೇಜ್ ಯೋಜನೆಯ ಕಾಮಗಾರಿಗಳು ಈ ಕೆಳಕಂಡ ಕಾರಣಗಳಿಂದ ಪೂರ್ಣಗೊಂಡಿಲ್ಲ. ಹಿಪ್ಪರಗಿ ಬ್ಯಾರೇಜ್ ಯೋಜನೆಯಕಾಮಗಾರಿಯನ್ನು 1973ರಲ್ಲಿ ಬರಪರಿಹಾರದಡಿಯಲ್ಲಿ ಪ್ರಾರಂಭಿಸಿ, 1974-75 ರಿಂದ 1980-81ರವರೆಗೆ ಮುಂದುವರಿಸಿ ಬ್ಯಾರೇಜ್‌ನ ಎಡ ಮತ್ತು ಬಲ, ಭಾಗದ ಮಣ್ಣಿನ ಏರಿ ಕಾಮಗಾರಿಯನ್ನು ಭಾಗಶಃ ಕೈಗೊಳ್ಳಲಾಯಿತು. ನಂತರ 1987-88ರಿಂದ ಕಾಮಗಾರಿಯನ್ನು ಮುಂದುವರಿಸಲಾಗಿದ್ದು, ಬ್ಯಾರೇಜ್ ಭಾಗದ ತಳಪಾಯದ ಮಟ್ಟಕ್ಕಿಂತ ಸುಮಾರು 6 ಮೀಟರ್ ಕೆಳಗಡೆ ಬೋಲ್‌ಬೆಡ್ ಲೇಯರ್ ಇದ್ದುದು ಕಂಡು ಬಂದಿತು. ಇದರಿಂದ ಮುಂದೆ ಬ್ಯಾರೇಜ್‌ಗೆ ಅಪಾಯವಾಗುವುದನ್ನು ತಡೆಯಲು ಇದಕ್ಕೆ ಪರಿಹಾರೋಪಾಯ ಕ್ರಮಗಳನ್ನು 1992ರಲ್ಲಿ ಕೈಗೊಂಡು ಸ್ಪಿಲ್‌ವೇ ಕೆಳಗಡೆ 474.84 ಮೀ ಸುರಂಗ ತೋಷಿಯರ್ ಕೀಅಳವಡಿಸಿ, ಗ್ರೌಟಿಂಗ್ ಮಾಡಿ ಫೌಂಡೇಷನ್ ಟ್ರೀಟ್‌ಮೆಂಟ್ ಕೆಲಸವನ್ನು 1997ರಲ್ಲಿ ಪೂರ್ಣಗೊಳಿಸಲಾಯಿತು. ನಂತರ ಸ್ಪಿಲ್‌ವೇನ ಉಳಿದ ಕಾಮಗಾರಿಯನ್ನು ಮುಂದುವರೆಸಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ.

ಆ) ಪ್ರಾರಂಭದಿಂದ ಮಾರ್ಚ್ 2000ದವರೆಗೆ ರೂ. 40.32 ಕೋಟಿ ಖರ್ಚು ಮಾಡಲಾಗಿದೆ.

ಇ) ರೂ. 485.09 ಕೋಟಿ ಬೇಕಾಗಿರುತ್ತದೆ.